International Journal of Kannada Research
www.kannadajournal.com

ISSN: 2454–5813
IJKR 2024; 10(1): 187-189
© 2024 IJKR
www.kannadajournal.com
Received: 05-01-2024
Accepted: 10-02-2024

**ಶ್ರೀರಂಜಿನಿ ಕೆ.ಜಿ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಬಿ.ಎಂ.ಎಸ್ ಮಹಿಳಾ
ಮಹಾವಿದ್ಯಾಲಯ,
ಬಸವನಗುಡಿ,
ಬೆಂಗಳೂರು, ಕರ್ನಾಟಕ,
ಭಾರತ

**ಮಂಜುಳ ಎಲ್**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ
ಬಿ.ಎಂ.ಎಸ್ ಮಹಿಳಾ
ಮಹಾವಿದ್ಯಾಲಯ
ಬಸವನಗುಡಿ,
ಬೆಂಗಳೂರು, ಕರ್ನಾಟಕ,
ಭಾರತ

Corresponding Author:
**ಶ್ರೀರಂಜಿನಿ ಕೆ.ಜಿ**
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಬಿ.ಎಂ.ಎಸ್ ಮಹಿಳಾ
ಮಹಾವಿದ್ಯಾಲಯ,
ಬಸವನಗುಡಿ,
ಬೆಂಗಳೂರು, ಕರ್ನಾಟಕ,
ಭಾರತ

# ನೇಮಿಚಂದ್ರರ ಕೃತಿಗಳಲ್ಲಿ ವೈಜ್ಞಾನಿಕ ನಿಲುವುಗಳು

## ಪ್ರಧಾನ ಲೇಖಕರು, ಸಹ ಲೇಖಕರು

**ಪೀಠಿಕೆ**

'ಬೆಳಕಿನೊಂದು ಕಿರಣ', 'ನಮ್ಮ ಕನಸುಗಳಲ್ಲಿ ನೀವಿದ್ದೀರಿ', 'ಬದುಕು ಬದಲಿಸಬಹುದು' ಹೀಗೆ ಬರೆಯುತ್ತಾ ಹೋದರೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇಂತಹ ಜೀವನೋತ್ಸಾಹ ತುಂಬುವ ಅಪೂರ್ವ ಕೃತಿಗಳನ್ನು ಕನ್ನಡಕ್ಕೆ ನೀಡಿದವರು 'ನೇಮಿಚಂದ್ರ'. ವೃತ್ತಿಯಲ್ಲಿ ಇಂಜಿನಿಯರಿಂಗ್ ಪದವೀಧರೆಯಾಗಿದ್ದರು ಸಹ ಪ್ರವೃತ್ತಿಯಲ್ಲಿ ಸಾಹಿತಿ ಬರಹಗಾರ್ತಿ, ವಿಜ್ಞಾನದ ವಸ್ತುವನ್ನು ಒಳಗೊಂಡಂತೆ ಬರೆದ ಸಾಹಿತ್ಯ ಕೃತಿಗಳು ಸಾಹಿತ್ಯಕ್ಕೆ ಮೆರುಗನ್ನು ನೀಡಿದೆ. ಕೃತಿಗಳನ್ನು ಬರೆಯುವ ಸಂದರ್ಭದಲ್ಲಿ ಆ ವಿಚಾರಗಳ ಕುರಿತಾಗಿ ಪ್ರವಾಸ ಹಾಗೂ ಸಂಶೋಧನೆಯನ್ನು ನಡೆಸಿ ನಿಖರವಾದ ಮಾಹಿತಿಯನ್ನು ನೀಡುವುದು ನೇಮಿಚಂದ್ರರ ಬರಹಗಳ ವೈಶಿಷ್ಟ್ಯ.

ಮೇರಿ ಕ್ಯೂರಿಯ ಕುರಿತ ಅವರ 'ಬೆಳಕಿನೊಂದು ಕಿರಣ' ಪ್ರತಿಯೊಬ್ಬ ಓದುಗನಿಗೂ ಸಹ ಜೀವನಸ್ಫೂರ್ತಿ. ಹಾಗೆಯೇ ಪೆರುವಿನ ಪವಿತ್ರ ಕಣಿವೆಯಲ್ಲಿ ಬರೆಯುವ ಮೊದಲು ಅವರು ಪೆರುವಿಗೆ ಭೇಟಿ ನೀಡಿ ಅಲ್ಲಿನ ಜೀವನಶೈಲಿಯನ್ನು ಅರಿತು ಬರೆದಾಗ ಕೃತಿಯು ಹೆಚ್ಚಿನ ಸಹಜತೆಯಿಂದ ಮೂಡಿಬರಲು ಸಾಧ್ಯವಾಯಿತು.

ನೇಮಿಚಂದ್ರ ಅವರ ಕಥೆಗಳಲ್ಲಿ ಸೂಕ್ಷ್ಮತೆ ಸಂವೇದನಾಶೀಲತೆಯನ್ನು ಮಹಿಳೆಯ ಮನಸ್ಸಿನ ವ್ಯಾಪಾರಗಳನ್ನು ಸೂಕ್ಷ್ಮವಾಗಿ ತಿಳಿಸುತ್ತದೆ. ಇವರ ಕೃತಿಗಳನ್ನು ಗಮನಿಸಿದಾಗ ಮಹಿಳೆಯರ ಸಾಧನೆಯನ್ನು ಅನಾವರಣಗೊಳಿಸುವಂತಹ ಅನೇಕ ವಿಚಾರಗಳನ್ನು ಗಮನಿಸಬಹುದು. ಉದಾಹರಣೆಗೆ 'ಬೆಳಕಿನೊಂದು ಕಿರಣ ಮೇರಿ ಕ್ಯೂರಿ', 'ಪೆರುವಿನ ಪವಿತ್ರ ಕಣಿವೆಯಲ್ಲಿ' ಮುಂತಾದವು ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಎಷ್ಟೇ ಸಮಸ್ಯೆಗಳು ಎದುರಾದರೂ ಸಹ ಎಲ್ಲವನ್ನು ಮೀರಿ ಸಾಧನೆಯನ್ನು ಮಾಡಿದ ಎಷ್ಟೋ ಜನ ಸಾಧಕರಿದ್ದಾರೆ. ಮೇರಿ ಕ್ಯೂರಿ, ಎಲಿನ, ಮರಿಯಾ ರೇಖಿ ಇನ್ನೂ ಅನೇಕ ಮಹಿಳೆಯರನ್ನು ಗುರುತಿಸಬಹುದು.

ಭಾರತೀಯ ಸಂಸ್ಕೃತಿಯನ್ನು ಅವಲೋಕಿಸಿದಾಗ ತಲೆಮಾರಿನಿಂದಲೂ ಸಹ ಮಹಿಳೆ ಮನೆಯ ಕೆಲಸಗಳನ್ನು ಮಾಡುತ್ತಾ ಸಂಸಾರವನ್ನು ನಿರ್ವಹಿಸುತ್ತಾ ಮಕ್ಕಳ ಲಾಲನೆ ಪಾಲನೆಯನ್ನು ಮಾಡುತ್ತಿರುವುದನ್ನು ಕಾಣಬಹುದು. ಆದರೆ ನೇಮಿಚಂದ್ರರ ಕಥೆಗಳಲ್ಲಿ ಬರುವ ಅನೇಕ ಸ್ತ್ರೀ ಪಾತ್ರಗಳು ಈ ರೀತಿಯ ಪರಂಪರೆಯಿಂದ ಬಂದಂತಹ ಮಿತಿಗಳನ್ನು ಮೀರಿ ಸಾಧನೆಯ ಹಾದಿ ಹಿಡಿದು ಸಾಧಿಸಿದ್ದನ್ನು ಕಾಣಬಹುದು. ಸ್ವತ: ನೇಮಿಚಂದ್ರರನ್ನೇ ಗಮನಿಸಿದಾಗ ತಮ್ಮ

ಸಾಂಸಾರಿಕ ಜವಾಬ್ದಾರಿಗಳ ನಿರ್ವಹಣೆಯ ಜೊತೆಗೆ ಸ್ವತಂತ್ರವಾದ ಬದುಕನ್ನು ನಡೆಸಿದವರು. ಪ್ರವಾಸ ಕಥನಗಳನ್ನು ಬರೆಯುವಾಗ ಪ್ರವಾಸ ಮಾಡಿ ಅಲ್ಲಿನ ಜನಜೀವನವನ್ನು ವಿವರಿಸಿದವರು.

ನೇಮಿಚಂದ್ರರ ಕಥೆಗಳಲ್ಲಿಯೇ ಅದ್ಭುತವಾದ ಕೃತಿ ಎಂದರೆ 'ಬೆಳಕಿಗೊಂದು ಕಿರಣ ಮೇರಿ ಕ್ಯೂರಿ'. ಪೋಲೆಂಡಿನ ಪ್ರಖ್ಯಾತ ಮಹಿಳಾ ವಿಜ್ಞಾನಿ ರೇಡಿಯಮ್ ಹಾಗೂ ಪೋಲೋನಿಯಂ ಎಂಬ ಎರಡು ಮೂಲ ಧಾತುಗಳನ್ನು ಕಂಡುಹಿಡಿದಾಕೆ. ಮೇರಿ ಕ್ಯೂರಿಯ ಜೀವನವನ್ನು ತಿಳಿಸುವ ಕೃತಿ ಬೆಳಕಿನೊಂದು ಕಿರಣ ಮೇರಿ ಕ್ಯೂರಿ. 1862 ರಲ್ಲಿ ಜನಿಸಿದ ಕ್ಯೂರಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪ್ಯಾರಿಸ್ ಗೆ ಬಂದು ಹೆಣ್ಣೆಂಬ ಕಾರಣಕ್ಕೆ ಅನೇಕ ಅವಕಾಶಗಳಿಂದ ವಂಚಿತಳಾಗುತ್ತಾಳೆ. ಆದರೆ ತನ್ನ ಎಡೆಬಿಡದ ಪರಿಶ್ರಮದಿಂದ ಕೊಟ್ಟಿಗೆಯಂತಹ ಒಂದು ಪ್ರಯೋಗದಲ್ಲಿ ನಿರಂತರವಾಗಿ ಸಂಶೋಧನೆಯಲ್ಲಿ ತೊಡಗುತ್ತಾಳೆ. ಪಿಯರಿ ಕ್ಯೂರಿಯು ಸಹ ಸಂಶೋಧನೆಯಲ್ಲಿ ಜೊತೆಯಾಗುತ್ತಾನೆ. ಇವರಿಬ್ಬರ ಪರಿಶ್ರಮದ ಫಲವೇ ರೇಡಿಯಮ್. ಎಷ್ಟೇ ಬಡತನವಿದ್ದರೂ ಸಹ ರೇಡಿಯಮ್ ಅನ್ನು ತನ್ನ ಲಾಭಕ್ಕೆ ಬಳಸಿಕೊಳ್ಳದೆ ಸಮಾಜದ ಏಳಿಗೆಗಾಗಿ ಮುಡುಪಾಗಿ ಇಡುತ್ತಾರೆ. ಆಗಿನ ಕಾಲದಲ್ಲಿ ಮಹಿಳೆಯರಿಗೆ ಸರಿಯಾದ ಅವಕಾಶಗಳು ಇಲ್ಲದಿದ್ದರೂ ಸಹ ತನ್ನ ಸತತವಾದ ಪರಿಶ್ರಮದಿಂದ ಸಾಧನೆಯನ್ನು ಮಾಡುತ್ತಾಳೆ. ವಿಕಿರಣ ಕ್ಯಾನ್ಸರ್ ಇಂದ 1934ರಲ್ಲಿ ವಿಧಿವಶಳಾಗುತ್ತಾಳೆ. ಆದರೆ ಆಕೆ ಮಾಡಿದ ಸಾಧನೆ ನಿಜಕ್ಕೂ ಅವಿಸ್ಮರಣೀಯ.

ಈ ಕೃತಿಯನ್ನು ಬರೆಯುವ ಸಂದರ್ಭದಲ್ಲಿ ನೇಮಿಚಂದ್ರ ಅವರು ಪ್ಯಾರಿಸ್ ನಲ್ಲಿ ಆಕೆಯ ಪ್ರಯೋಗಾಲಯ, ಆಕೆ ಇದ್ದಂತಹ ಸ್ಥಳ, ಬದುಕಿನ ರೀತಿ ನೀತಿಯನ್ನೆಲ್ಲ ಅರಿತು ಬರೆದ ಕ್ಯೂರಿಯ ಕುರಿತ ಸುಂದರವಾದ ಪುಸ್ತಕವೇ ಬೆಳಕಿನೊಂದು ಕಿರಣ ಮೇರಿ ಕ್ಯೂರಿ. ಕ್ಯೂರಿಯ ಸಂಪೂರ್ಣ ಜೀವನವನ್ನು ಈ ಪುಸ್ತಕದಲ್ಲಿ ದಾಖಲಿಸಿದ್ದಾರೆ. ವಿದ್ಯಾರ್ಥಿಗಳಿಗೆ ಈ ಕೃತಿ ನಿಜಕ್ಕೂ ಜೀವನಸ್ಫೂರ್ತಿ. ಕೇವಲ ಕೃತಿಯಷ್ಟೇ ಅಲ್ಲದೆ ಅವಳ ಜೀವನವನ್ನು ಕುರಿತು ಡಾಕ್ಯುಮೆಂಟರಿ ಯನ್ನು ಸಹ ನೋಡಬಹುದು.

ನೇಮಿಚಂದ್ರ ಇನ್ನೊಂದು ಪ್ರಮುಖ ಪ್ರವಾಸ ಕಥನ ಪೆರುವಿನ ಪವಿತ್ರ ಕಣಿವೆಯಲ್ಲಿ. ಈ ಕಥನದಲ್ಲಿ ನೇಮಿಚಂದ್ರರು ಬರಿಯ ಪ್ರವಾಸವನ್ನು ಮಾತ್ರ ವಿವರಿಸದೆ ವೈಜ್ಞಾನಿಕ ಸಂಶೋಧನೆಯನ್ನು ಸಹ ನಡೆಸಿದ್ದಾರೆ. ತಮ್ಮ ಸಂಪೂರ್ಣ ಪ್ರವಾಸದಲ್ಲಿ 'ಪೆರು' ವೆಂಬ ಪುಟ್ಟ ದೇಶದ ವಿಶಿಷ್ಟತೆಗಳನ್ನು ಬಹಳ ಸುಂದರವಾಗಿ ಚಿತ್ರಿಸಿದ್ದಾರೆ. ಪೆರುವಿನಲ್ಲಿ ಅತ್ಯಂತ ಕುತೂಹಲಕಾರಿ ವಿಚಾರವೆಂದರೆ ನಾಸ್ಕ ಗೆರೆಗಳು. ಈ ನಾಸ್ಕ ಗೆರೆಗಳ ಬಗ್ಗೆ ಸಂಶೋಧನೆಯನ್ನು ನಡೆಸಿದ ಸಂಶೋಧಕ್ಕೆ ಮರಿಯಾ ರೇಖಿ.

ಈಕೆಯನ್ನು 'ಲೇಡಿ ಆಫ್ ದಿ ಲೈನ್ಸ್' ಎಂದು ಕರೆಯುತ್ತಾರೆ. ಅಮೆರಿಕಾದ ಇತಿಹಾಸಕಾರ ಪಾಲ್ ಕೊಸೆಕ್ ಮರಿಯ ರೇಖಿಯ ಜೊತೆಯಲ್ಲಿ ಸಂಶೋಧನೆಗೆ ತೊಡಗುತ್ತಾನೆ. ಆ ದೈತ್ಯ ಚಿತ್ರಗಳನ್ನು ಮರುಭೂಮಿಯ ಮೇಲೆ ಪೂರ್ವಜರು ಮಾಡಲು ಕಾರಣವನ್ನು ಹುಡುಕುತ್ತಾರೆ. ಮರಿಯಾ ರೇಖಿ ಈ ರೇಖೆಗಳು ಸೌರಮಾನ ಕ್ಯಾಲೆಂಡರ್ ಮತ್ತು ಖಗೋಳ ಘಟನೆಗಳ ವೀಕ್ಷಣೆ ಆಲಯವಾಗಿ ಬಳಸುತ್ತಿದ್ದರು ಎಂದು ಸಿದ್ಧಾಂತವನ್ನು ಮಂಡಿಸುತ್ತಾಳೆ. ಆದರೆ ಈ ಸಂಶೋಧನೆಯ ಕುರಿತು ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಈ ಗೆರೆಗಳು ದೇವತೆಗಳಿಂದ ಮಳೆಯನ್ನು ಕರೆಯುವುದಕ್ಕೆ ಸಂಬಂಧಿಸಿದ ಆರಾಧನೆ ಮತ್ತು ಧಾರ್ಮಿಕ ಸಮಾರಂಭಗಳ ಭಾಗವಾಗಿದ್ದವು ಎಂದು ಕೆಲವು ಸಂಶೋಧಕರು.

ಮರಿಯರೇಖಿ ತನ್ನ ಸಂಶೋಧನೆಯಿಂದ ಬಂದ ಹಣವನ್ನು ನಾಸ್ಕ ಮರುಭೂಮಿಯ ಸಂರಕ್ಷಣೆಗಾಗಿ ಪ್ರಚಾರ ಮಾಡಲು ಹಾಗೂ ಕಾವಲುಗಾರರನ್ನು ನೇಮಿಸಲು ಬಳಸಿದಳು. ಹೀಗೆ ಈ ಕೃತಿಯಲ್ಲಿ ಪೆರುವಿನ ದೇಶವನ್ನು ಅವರ ಜೀವನ ರೀತಿ ನೀತಿ ವೈಶಿಷ್ಟ್ಯವನ್ನು ಪರಿಚಯಿಸುವುದರ ಜೊತೆ ಜೊತೆಗೆ ಮರಿಯಾ ರೇಖಿ ಅಂತಹ ವಿಶಿಷ್ಟ ವಿಜ್ಞಾನಿಯನ್ನು ಸಹ ಪರಿಚಯಿಸುತ್ತಾರೆ. ಪರಕೀಯರ ದಾಳಿಗೆ ತುತ್ತಾದ ಪೆರು ಭಾರತದ ಹಾಗೆಯೇ ಇರುವಂತಹ ಒಂದು ವಿಶಿಷ್ಟವಾದ ಪುರಾತನ ಸಂಸ್ಕೃತಿಯನ್ನು ಒಳಗೊಂಡಂತಹ ದೇಶವೆಂಬುದನ್ನು ಪರಿಚಯಿಸುತ್ತಾರೆ. ಈ ಕೃತಿಯನ್ನು ಓದುತ್ತಾ ಹೋದಾಗ ಪೆರುವಿನಲ್ಲಿಯೇ ಓಡಾಡಿದಂತಹ ಅನುಭವ ಉಂಟಾಗುತ್ತದೆ.

ಬದುಕು ಬದಲಿಸಬಹುದು ಇವರ ಸರಳ ಸುಂದರ ಕೃತಿ, ಈ ಲೇಖನಗಳಲ್ಲಿ ಒಂದೊಂದು ಪುಟ್ಟ ಕಥೆಯು ಸಹ ಭಿನ್ನ ರೀತಿಯಲ್ಲಿ ನಮ್ಮ ಜೀವನವನ್ನು ಹುರಿದುಂಬಿಸುತ್ತದೆ. ಆಯ್ಕೆ ಇದೆ ನಮ್ಮ ಕೈಯಲ್ಲಿ ಎಂಬ ಒಂದು ಪುಟ್ಟ ಲೇಖನ ಜೀವನಕ್ಕೆ ಸಾವಿರಾರು ದಾರಿಗಳನ್ನು ತೋರುತ್ತದೆ. ಹಿಂದಿನ ಕಾಲದಲ್ಲಿ ಎಲ್ಲವೂ ವೇಗವಾಗಿ ಆಗಬೇಕೆಂಬ ಆಸೆ ಯಾವುದಕ್ಕೂ ತಾಳ್ಮೆ ಇಲ್ಲ, ಎಲ್ಲವೂ ಅದೃಷ್ಟ ದುರದೃಷ್ಟವೆಂಬ ನಂಬಿಕೆ ಆದರೆ ಪ್ರಯತ್ನ ಪಟ್ಟಲ್ಲಿ ಎಲ್ಲವೂ ಸಾಧ್ಯ ಎಂಬುದನ್ನು ಪುಟ್ಟ ಪುಟ್ಟ ಲೇಖನಗಳು ಸಾರುತ್ತವೆ. ಈ ಕಾಲದ ಯುವ ಪೀಳಿಗೆ ಓದಲೇಬೇಕಾದ ಕೃತಿ ಬದುಕು ಬದಲಿಸಬಹುದು ಸಮಾಜದ ಮಧ್ಯಮ ಮತ್ತು ಕೆಳ ವರ್ಗದವರ ಬದುಕನ್ನು ಚಿತ್ರಿಸುತ್ತಾ ನಮ್ಮ ಬದುಕನ್ನು ನಾವು ಹೇಗೆ ಕಟ್ಟಿಕೊಳ್ಳಬಹುದು

ಎಂಬ ಆತ್ಮವಿಶ್ವಾಸವನ್ನು ಮೂಡಿಸುವ ಕೃತಿ ಇದಾಗಿದೆ.

ನೇಮಿಚಂದ್ರರ ಕೃತಿಯ ಮುಖ್ಯ ಆಶಯ ಬದುಕು ಮುಗಿಯದ ಪಯಣ. ಅಲ್ಲಿ ಸೋಲಿಗಿಂತ ಗೆಲುವು ಮುಖ್ಯ ಈ ಕೃತಿಯಲ್ಲಿನ ಕಥೆಗಳಲ್ಲಿ ಜೀವನದ ಹಲವು ಮುಖಗಳ ಪರಿಚಯವಾಗುತ್ತದೆ. ಸುಖ ದುಃಖ ನೋವು ನಲಿವು ನಿರಾಶೆ ಅಪಮಾನ ಎಲ್ಲವನ್ನು ಮೀರಿ ದಿಟ್ಟತನದಿಂದ ಮತ್ತೆ ಬದುಕನ್ನು ಪ್ರಾರಂಭಿಸುವ ಛಲವನ್ನು ಕಾಣಬಹುದು.

ನೇಮಿಚಂದ್ರರ ಕಥೆಗಳ ಜೀವಾಳ ಮಹಿಳೆ ಮತ್ತೆ ಬರೆದ ಕಥೆಗಳು ಎಂಬ ಕಥೆಯಲ್ಲಿ ನಾಯಕಿ ಮದುವೆಯಾಗದಿದ್ದರೂ ಅಲ್ಲಿ ನಿಜವಾದ ಸುಖ ಅನುಭವಿಸಲಾಗದೆ ಅಂತಹ ಸುಖ ಸಾಧ್ಯವಾಗುವ ಗೆಳೆಯನೊಡನೆ ಯಾವ ಪಾಪ ಪ್ರಜ್ಞೆಯೂ ಇಲ್ಲದೆ ಸುಖ ಅನುಭವಿಸುತ್ತಾಳೆ. ತಾಯ್ತನದ ಬೇರೆ ಬೇರೆ ರೀತಿಯ ಸಮಸ್ಯೆಗಳ ಇಂದಿನ ಲೇಖಕಿಯರ ಕಥೆಗಳಿಗೆ ಪ್ರಧಾನ ವಸ್ತುವಾಗಿದೆ. ಇವರ ಹೊಸ ಹುಟ್ಟು ಎಂಬ ಕಥೆಯನ್ನು ಗಮನಿಸಿದಾಗ ಕತೆಯ ನಾಯಕಿ ತನ್ನ ದೈಹಿಕ ನ್ಯೂನತೆಯಿಂದಾಗಿ ತಾಯ್ತನದ ಅವಕಾಶವಿಲ್ಲವಾದಾಗ ತಾಯ್ತನ ಅನಿವಾರ್ಯ ಎಂಬ ಪರಂಪರಾಗತ ನಂಬಿಕೆಯೊಂದಿಗೆ ಸೆಣಸಿ ಕೊನೆಗೂ ಅದು ಅನಿವಾರ್ಯವಲ್ಲ ಎಂಬ ನಿರ್ಧಾರಕ್ಕೆ ಬರುತ್ತಾಳೆ. ಇವರೆಲ್ಲಾ ಬರಹಗಳನ್ನು ಗಮನಿಸಿದಾಗ ಪರಂಪರಾಗತ ನಿರೀಕ್ಷೆಗಳನ್ನು ಮುರಿಯಬೇಕೆಂಬ ಆಶಯವನ್ನು ಕಾಣಬಹುದು.

ನೇಮಿಚಂದ್ರರ ಚಿಂತನಶೀಲ ಮನಸ್ಸು ವೈವಿಧ್ಯಪೂರ್ಣವಾಗಿತ್ತು. ಸಾಮಾಜಿಕ ಚಿಂತನೆಗಳಲ್ಲೂ ಅಪಾರವಾದ ಪಾತ್ರ ನಿರ್ವಹಿಸಿದೆ ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು ಈ ನಿಟ್ಟಿನಲ್ಲಿ ಒಂದು ಗಮನಾರ್ಹ ಕೃತಿ. ಇವರ ಕಾದಂಬರಿಗಳು ಸಹ ವಿಜ್ಞಾನದ ವಸ್ತುವನ್ನು ಒಳಗೊಂಡ ಅವರ ಕಥಾಹರವು ಕನ್ನಡ ಸಾಹಿತ್ಯ ಲೋಕಕ್ಕೆ ಒಂದು ಮೆರುಗು ತಂದಿದ್ದು ಅಪಾರ ಜನಪ್ರಿಯತೆಯನ್ನು ಗಳಿಸಿದೆ. ಮಹಿಳಾ ವಿಜ್ಞಾನಿಗಳನ್ನ ಕುರಿತು ಅದ್ಭುತ ಕೃತಿ ಒಂದು ಕನಸಿನ ಪಯಣ. ಈ ಕೃತಿಯನ್ನು ರಚಿಸುವ ಮೊದಲು ಎಲ್ಲ ವಿಜ್ಞಾನಿಗಳ ಬಗ್ಗೆ ಸಾಕಷ್ಟು ಸಂಶೋಧನೆ ನಡೆಸಿ ಕೃತಿಯನ್ನು ರಚಿಸಿದ್ದಾರೆ.

ಆಧುನಿಕ ಸಾಹಿತ್ಯ ಪ್ರಾಚೀನ ಸಾಹಿತ್ಯದ ಪ್ರೇರಣೆ ಮತ್ತು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಸೃಷ್ಟಿಯಾದದ್ದು. 20ನೇ ಶತಮಾನದ ಕಥಾಹರವು ಬಹಳ ವಿಸ್ತಾರವಾದದ್ದು. ಸಾಂಸ್ಕೃತಿಕವಾದ ಮತ್ತು ಸಾಮಾಜಿಕವಾದ ಚಲನಶೀಲತೆಯ ಸಂದರ್ಭದಲ್ಲಿ ಮನುಷ್ಯರ ಸ್ವಭಾವಗಳನ್ನು ಆಧುನಿಕ ಲೇಖಕರ ಬರಹಗಳು ಶೋಧಿಸುತ್ತದೆ. ಆಧುನಿಕ ಕಾಲದ ಬರವಣಿಗೆಗಳು ಸರಳತೆ ಹಾಗೂ ನೀರೂಪಣೆಯಿಂದ ಸಂಕ್ಷಿಪ್ತತೆ ಹಾಗೂ ಸೂಕ್ಷ್ಮತೆಯಿಂದ ಗಮನವನ್ನು ಸೆಳೆಯುತ್ತಿವೆ.

## ಪರಾಮರ್ಶನ ಗ್ರಂಥಗಳು


1. ಪೆರುವಿನ ಪವಿತ್ರ ಕಣಿವೆಯಲ್ಲಿ: ನೇಮಿಚಂದ್ರ ನವಕರ್ನಾಟಕ ಪ್ರಕಾಶನ
2. ರೇಡಿಯಂ ಮಹಾಮಾತೆ ಮೇರಿಕ್ಯೂರಿ: ನೇಮಿಚಂದ್ರ ಅಂಕಿತ ಪುಸ್ತಕ ಪ್ರಕಾಶನ
3. ಬದುಕು ಬದಲಿಸಬಹುದು: ನೇಮಿಚಂದ್ರ ನವಕರ್ನಾಟಕ ಪ್ರಕಾಶನ